## ಭಂಡಾರದ ಪಲ್ಲಕ್ಕಿ



ಅಳದಂಗಡಿಯ ಅಜಿಲ ವಂಶದ ಅರಸರು ಶತಮಾನಗಳ ಕಾಲ ಕರಾವಳಿಯಲ್ಲಿ ಆಡಳಿತ ನಡೆಸಿದವರು. ಈಗಲೂ ಅವರ ವಾಸದ ಅರಮನೆ ಸುವ್ಯವಸ್ಥಿತವಾಗಿದೆ. ಸಮೀಪದ ಸತ್ಯ ದೇವತೆಯ ಗುಡಿಯಲ್ಲಿ ವರ್ಷದ ಮುನ್ನೂರು ದಿನಗಳಲ್ಲಿ ದೈವದ ಕೋಲ ನಡೆಯುತ್ತದೆ. ಆಗ ದೈವವು ಧರಿಸುವ ಬೆಳ್ಳಿಯ ಆಭರಣಗಳಿರುವ ಭಂಡಾರವನ್ನು ಇರಿಸಿ ದೇವದ ಗುಡಿಗೆ ತೆಗೆದುಕೊಂಡು ಹೋಗಲು ಬೆತ್ತದ ಪಲ್ಲಕ್ಕಿ ಬಳಸುತ್ತಾರೆ. ಅದರ ಚಿತ್ರವೇ ಇದು. ಸುಮಾರು ನಾಲ್ಕು ಅಡಿ ಎತ್ತರ ಹಾಗೂ ಅಷ್ಟೇ ಉದ್ದವಿರುವ ಪಲ್ಲಕ್ಕಿಯನ್ನು ಬೆತ್ತವನ್ನು ಸೀಳಿ ಕಲಾತ್ಮಕವಾಗಿ ಹೆಣೆದಿರುವುದು ಆಕರ್ಷಕವಾಗಿದೆ. ನೂರಾರು ವರ್ಷಗಳಿಂದ ಇದನ್ನು ಜತನವಾಗಿ ಕಾಪಿಡಲಾಗಿದೆ.

—ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ

## ಮರೆಯಾಗುತ್ತಿರುವ ‘ಸುಣ್ಣದ ಬಟ್ಟಿ’



ಅದೊಂದು ಕಾಲವಿತ್ತು. ಹಬ್ಬ ಹರಿದಿನಗಳಲ್ಲಿ ಮತ್ತು ವಿಶೇಷ ದಿನಗಳಲ್ಲಿ ಮನೆಯ ಗೋಡೆಗಳ ಅಂದ ಹೆಚ್ಚಿಸಲು ಸುಣ್ಣ ಬಳಿಯುತ್ತಿದ್ದರು. ಎಲೆ ಅಡಿಕೆ ಜಗಿಯುವಾಗ ಬಾಯಿಯನ್ನು ಕೆಂಪಾಗಿಸಲು ಸುಣ್ಣ ಬೇಕೇ ಬೇಕು. ಸುಣ್ಣ ತಯಾರಿಕೆಗೆ ಅಗತ್ಯವಿರುವ ಸುಣ್ಣದ ಕಲ್ಲುಗಳನ್ನು ಬಟ್ಟಿಯಲ್ಲಿ ಹಾಕಿ ಹದವಾಗಿ ಸುಟ್ಟ ನಂತರ ನೀರಿನಲ್ಲಿ ಹಾಕಿ ಬಟ್ಟೆಯಲ್ಲಿ ಸೋಸಿದರೆ ‘ಸುಣ್ಣ’ ಬಳಸಲು ತಯಾರಾಗುತ್ತಿತ್ತು. ಸುಣ್ಣ ತಯಾರಿಸುವುದನ್ನೇ ಕಾಯಕವನ್ನಾಗಿಸಿಕೊಂಡು ಹಲವು ಕುಟುಂಬಗಳು ಜೀವನ ನಡೆಸುತ್ತಿದ್ದವು.

ಆದರೆ ಈಗ ಕಾಲ ಸಂಪೂರ್ಣ ಬದಲಾಗಿದೆ. ಸುಣ್ಣದ ಜಾಗವನ್ನು ತರಹೇವಾರಿ ಬಣ್ಣಗಳು ಆಕ್ರಮಿಸಿಕೊಂಡು ಸುಣ್ಣ ತಯಾರಿಸುವವರು ಕಡಿಮೆಯಾಗಿದ್ದಾರೆ. ಗದಗದ ಡಂಬಳ ಗ್ರಾಮದಲ್ಲಿರುವ ಶ್ರೀದೊಡ್ಡ ಬಸಪ್ಪ ದೇವಾಲಯಕ್ಕೆ ಈಚೆಗೆ ಹೋಗಿದ್ದಾಗ ದಾರಿಯಲ್ಲಿ ಕಾಣಿಸಿದ ಸುಣ್ಣದ ಬಟ್ಟಿಗಳು ಗಮನ ಸೆಳೆದವು. ಸುಣ್ಣದ ತಯಾರಿಕೆಯನ್ನೇ ಉದ್ಯೋಗವನ್ನಾಗಿಸಿಕೊಂಡು ಜೀವನ ಸಾಗಿಸುತ್ತಿರುವ ಮೂರ್ನಾಲ್ಕು ಕುಟುಂಬಗಳು ಡಂಬಳ ಗ್ರಾಮದಲ್ಲಿದ್ದು, ಆಧುನಿಕ ಯುಗದಲ್ಲೂ ಮನೆಗಳಿಗೆ ಸುಣ್ಣ ಬಳಿಯುವುದನ್ನು ಬಿಟ್ಟಿಲ್ಲವೆಂದು ಗ್ರಾಮಸ್ಥರು ತಿಳಿಸಿದರು. ಪುರಾತನ ದೇವಾಲಯವುಳ್ಳ ಡಂಬಳ ಗ್ರಾಮದಲ್ಲಿ, ಸುಣ್ಣ ತಯಾರಿಕೆಯನ್ನು ಜೀವಂತವಾಗಿಸಿರುವುದು ಶ್ಲಾಘನೀಯ.

—ಜಿ. ನಾಗೇಂದ್ರ, ಕಾವೂರು, ಸಂಡೂರು

## ಅಕ್ಕತಂಗಿ ದಿಡುಗು





ಚಾಲುಕ್ಯರ ರಾಜಧಾನಿ ಎನಿಸಿಕೊಂಡ ಬಾಗಲಕೋಟೆಯ ಬಾದಾಮಿ ತಾಲ್ಲೂಕಿನ ವಿಶ್ವವಿಖ್ಯಾತ ಮೇಣಬಸದಿಯ ಪೂರ್ವದಿಕ್ಕಿಗೆ ಹೊಂದಿಕೊಂಡ ಬೆಟ್ಟದಲ್ಲಿ ಜೀವಂತಿಕೆ ಕಳೆಗಟ್ಟಿದೆ. ವರ್ಷಧಾರೆ ಶುರುವಾಗಿ ರೋಹಿಣಿ ಮಳೆಯು ಅಬ್ಬರಿಸುತ್ತಿದ್ದು, ಬೆಟ್ಟದ ಮೇಲಿಂದ ಪ್ರತಿ ವರ್ಷದಂತೆ ಈ ಸಲವು ನೀರಿನ ಝರಿಗಳು ದುಮ್ಮಿಕ್ಕಿ ಹರಿಯುತ್ತಿವೆ. ಈ ಝರಿಗಳು ಎರಡು ಕವಲಾಗಿ ಹರಿಯುವುದರಿಂದ ಇದಕ್ಕೆ ‘ಅಕ್ಕತಂಗಿ’ ದಿಡುಗು ಅಂತಾ ಹೆಸರು ಬಂದಿದೆ. ಈ ಅಕ್ಕತಂಗಿ ದಿಡುಗು ಬಿದ್ದರೆ, ಅದರ ಕೆಳಗೆ ಇರುವ ಐತಿಹಾಸಿಕ ಹಿನ್ನೆಲೆಯ ಅಗಸ್ತ್ಯ ತೀರ್ಥ ಪುಷ್ಕರಣಿ ತುಂಬುತ್ತದೆ. ನೋಡಲು ಈ ದೃಶ್ಯ ಬಲು ಮನಮೋಹಕ. ಇದನ್ನು ಕಣ್ತುಂಬಿಕೊಳ್ಳಲು ಪ್ರವಾಸಿಗಳ ದಂಡೇ ಇತ್ತ ಸಾಗಿ ಬರುತ್ತಿದೆ.

—ಮಹಾಂತೇಶ ಬಾಗೇವಾಡಿ, ಬಾದಾಮಿ